ವಸತಿ ಗೃಹಗಳಿಗೆ ಮೂಲ ಸೌಲಭ್ಯವನ್ನು ನೀಡುವ ಬಗ್ಗೆ

1139 (1961) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ಮತ್ತು ವಿಲ್ಸನ್‌ಗಾರ್ಡನ್‌ನಲ್ಲಿರುವ ಸರ್ಕಾರಿ ವಸತಿ ಗೃಹಗಳು ಜೀವನ್ ಭೀಮಾನಗರದ ವಸತಿ ಗೃಹಗಳಿಗಿಂತ ವಿನ್ಯಾಸದಲ್ಲಿ ವ್ಯತ್ಯಾಸವಿದ್ದ, ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಯೆ?

ಆ) ಮೇಲ್ಕಂಡ ಸರ್ಕಾರಿ ವಸತಿ ಗೃಹಗಳಲ್ಲಿರುವ ನೌಕರರು ನೀಡುವ ಬಾಡಿಗೆ ದರವು ಒಂದೇ ಆಗಿದ್ದು, ಜೀವನ್ ಭೀಮಾ ನಗರದಲ್ಲಿ ಒದಗಿಸಿರುವ ಸೌಲಭ್ಯಗಳನ್ನು ಇತರೆ ಸರ್ಕಾರಿ ವಸತಿ ಗೃಹಗಳಿಗೆ ಒದಗಿಸದಿರಲು ಕಾರಣಗಳೇನು?

ಇ) ಈ ತಾರತಮ್ಯವನ್ನು ಹೋಗಲಾಡಿಸಲು ಅನೇಕ ಬಾರಿ ಮನವಿ ಸಲ್ಲಿಸಿದ್ದು ಹಾಗೂ ಸದನದಲ್ಲಿ ಪ್ರಶ್ನೆಗಳನ್ನು ಕೇಳಿದಾಗ್ಯೂ ಸಹ ಮೂಲ ಸೌಲಭ್ಯವನ್ನು ಒದಗಿಸದಿರುವ ಬಗ್ಗೆ ಸರ್ಕಾರದ ನಿಲುವೇನು?

ಈ) ಈ ದಿಸೆಯಲ್ಲಿ ಹಂತ ಹಂತವಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದು, ಈಗಲಾದರೂ ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಯಪಯೋಗಿ ಮಂತ್ರಿಗಳು) :

ಅ) ಬಂದಿದೆ.

ಆ) ವಸತಿ ಗೃಹಗಳ ಕಟ್ಟುವಿಕೆಯ ವಿನ್ಯಾಸ ಮಾದರೀ ಇವುಗಳಿಂದಾಗಿ. ಈ ವ್ಯತ್ಯಾಸಗಳು ಸಹಜವಾಗಿರುತ್ತೆ.

ಇ) ಮೂಲ ಸೌಲಭ್ಯಗಳನ್ನೊದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಮೂಲ ಸೌಲಭ್ಯಗಳನ್ನೊದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಕೊಟ್ಟೂರು-ಹರಿಹರ ರೈಲು ರಸ್ತೆಯ ವಿಸ್ತಾರ

1140 (1457) ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಟ್ಟೂರಿನಿಂದ ಹರಿಹರಕ್ಕೆ ಹೋಗುವ ರಸ್ತೆಯನ್ನು ವಿಸ್ತಾರ ಮಾಡಲು ಸರ್ಕಾರ ಆಲೋಚಿಸಿದೆಯೇ;

ಆ) ಈ ರಸ್ತೆಯನ್ನು ವಿಸ್ತಾರ ಮಾಡುವ ವಿಷಯ ಬಹಳ ಕಾಲದ ಬೇಡಿಕೆಯಾಗಿರುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ ಸದರಿ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೇ;

ಈ) ಸಲ್ಲಿಸದಿದ್ದರೆ ಈಗಲಾದರೂ ಮನವಿಯನ್ನು ಸಲ್ಲಿಸಲಾಗುವುದೆ?